# ವಿವಿಗಳಲ್ಲಿ ಏನು ನಡೆಯುತ್ತಿವೆ?

ವಿಶ್ವವಿದ್ಯಾಲಯಗಳೆಂದರೆ ಉನ್ನತ ಶಿಕ್ಷಣದ ಅತ್ಯುನ್ನತ ವೇದಿಕೆಗಳು ಎಂಬ ವಿಶ್ವಾಸಕ್ಕೆ ಭಂಗ ತರುವ ವಿದ್ಯಮಾನಗಳು ನಡೆಯುತ್ತಿವೆ. ಸ್ನಾತಕೋತ್ತರ ಪದವಿ ಶಿಕ್ಷಣ ಮಾತ್ರವಲ್ಲದೆ ವಿವಿಧ ಜ್ಞಾನ ಶಿಸ್ತುಗಳಲ್ಲಿ ಜಾಗತಿಕ ಗುಣಮಟ್ಟದ ಸಂಶೋಧನೆಗಳೂ ನಡೆಯಬೇಕು ಎಂಬುದು ವಿಶ್ವವಿದ್ಯಾಲಯಗಳ ಕುರಿತಾಗಿ ಶ್ರೀಸಾಮಾನ್ಯರ ನಿರೀಕ್ಷೆ. ವಿಶ್ವವಿದ್ಯಾಲಯಗಳಿಂದ ಯಾವುದೇ ಪ್ರಯೋಜನ ಪಡೆಯದಿದ್ದರೂ ಶ್ರೀಸಾಮಾನ್ಯರ ತೆರಿಗೆ ಹಣವೇ ಇವುಗಳಿಗೆ ವೆಚ್ಚವಾಗುತ್ತಿದೆ. ಸಮಾಜದ ಅತ್ಯಂತ ಕೆಳಸ್ತರದ ವ್ಯಕ್ತಿಯ ಪಾಲು ಕೂಡ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಮೀಸಲಾದ ವಿಶ್ವವಿದ್ಯಾಲಯಗಳ ನಿರ್ವಹಣೆಯಲ್ಲಿ ಸೇರಿರುತ್ತದೆ. ವಿಶ್ವವಿದ್ಯಾಲಯಗಳ ಕುರಿತಾಗಿ ಮಾಧ್ಯಮಗಳಲ್ಲಿ ಬಯಲಾಗುತ್ತಿರುವ ಸಂಗತಿಗಳನ್ನು ಗಮನಿಸಿದರೆ ಉನ್ನತ ಶಿಕ್ಷಣ ಕ್ಷೇತ್ರವೂ ಇತರೆಲ್ಲ ಕ್ಷೇತ್ರಗಳಂತೆ ಅಧೋಗತಿಗೆ ಇಳಿದಿದೆ ಎಂದು ವಿಷಾದ ಪಡುವಂತಾಗುತ್ತದೆ.


ಉತ್ತಮವಾದ ಜೀವನ ಮೌಲ್ಯಗಳ ಬೋಧನೆಯ ಮೂಲಕ ಸಾಮಾಜಿಕ ಬದುಕಿನಲ್ಲಿ ಶ್ರೀಮಂತಿಕೆಯನ್ನು ತರಬೇಕಿರುವ ಉಪನ್ಯಾಸಕ, ಪ್ರಾಧ್ಯಾಪಕ ವರ್ಗ ರಾಗ ದ್ವೇಷಗಳನ್ನು ನಿಯಂತ್ರಿಸಲಾಗದೆ ಅದು ವಿದ್ಯಾರ್ಥಿ ಸಮೂಹದ ಮೇಲೆಯೂ ಕೆಟ್ಟ ಪರಿಣಾಮ ಬೀರುವಂತಾಗಿದೆ. ಅಕ್ರಮ, ಅನ್ಯಾಯ, ಅದಕ್ಷತೆ, ಅವ್ಯವಹಾರ, ಅಶಿಸ್ತು ಮೊದಲಾದ ಅನಿಷ್ಟಗಳು ವಿಶ್ವವಿದ್ಯಾಲಯಗಳ ಆಡಳಿತ ಮತ್ತು ಬೋಧನಾ ಕ್ಷೇತ್ರಗಳಲ್ಲಿ ಹದ್ದು ಮೀರಿ ವ್ಯಕ್ತವಾಗಿರುವುದನ್ನು ಆಡಳಿತದ ವರಿಷ್ಠರು ಗಮನಿಸುವಂತಾಗಿದೆ. ವಿಶ್ವವಿದ್ಯಾಲಯಗಳಿಗೆ ಕುಲಾಧಿಪತಿಯಾದ ರಾಜ್ಯಪಾಲರೇ ಈ ನಿಟ್ಟಿನಲ್ಲಿ ಗದರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಶಿಸ್ತಿನ ಮೇರೆ ಮೀರಿದರೆ ಕುಲಪತಿಗಳನ್ನು ಕೂಡ ಶಿಸ್ತು ಕ್ರಮಕ್ಕೆ ಒಳಪಡಿಸುವುದಾಗಿ ರಾಜ್ಯಪಾಲರು ಎಚ್ಚರಿಕೆ ನೀಡಬೇಕಾಗಿ ಬಂದಿರುವುದು ವಿಶ್ವವಿದ್ಯಾಲಯಗಳು ಮುಟ್ಟಿರುವ ಅಧೋಗತಿಗೆ ನಿದರ್ಶನ.

ವಿಶ್ವವಿದ್ಯಾಲಯಗಳು ಸ್ವಯಂ ಆಡಳಿತದ ಜ್ಞಾನ ದೇಗುಲಗಳು ಎಂಬುದನ್ನು ಸರ್ಕಾರ ನಡೆಸುವವರು ಮರೆಯಬಾರದು. ಆದರೆ ಕುಲಪತಿ ಮಾತ್ರವಲ್ಲದೆ, ಕುಲಸಚಿವ, ಉಪಕುಲಸಚಿವರೇ ಮೊದಲಾದ ಹುದ್ದೆಗಳನ್ನು ಶೈಕ್ಷಣಿಕ ಕ್ಷೇತ್ರಕ್ಕೆ ಹೊರತಾದವರಿಂದ ತುಂಬಿ ವಿಶ್ವವಿದ್ಯಾಲಯಗಳನ್ನು ನಿಯಂತ್ರಿಸಲು ಹೊರಟ ಪರಿಣಾಮ ಉನ್ನತ ಶಿಕ್ಷಣ ಕ್ಷೇತ್ರ ವ್ಯಾಪಕ ಹಸ್ತಕ್ಷೇಪದ ಅಪಾಯದ ಸುಳಿಗೆ ಸಿಲುಕುವಂತಾಗಿದೆ. ಅಧಿಕಾರಸ್ಥರ ಪ್ರತಿಷ್ಠೆಗೆ ವಿಶ್ವವಿದ್ಯಾಲಯಗಳು ಸಿಗಬಾರದು ಎಂದು ಕಟ್ಟುನಿಟ್ಟಿನ ಕಾನೂನುಗಳನ್ನು ಕಾಲಕಾಲಕ್ಕೆ ರೂಪಿಸಲಾಗಿದೆಯಾದರೂ ಅವುಗಳಿಗೂ ತಿದ್ದುಪಡಿ ತರುವ ಇಲ್ಲವೇ ಅಧಿಕಾರವಾಣಿಯಿಂದ ಅವನ್ನು ಉಲ್ಲಂಘಿಸುವ ಪ್ರವೃತ್ತಿ ಅಪರೂಪವಲ್ಲ. ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ನೀಡಿದ ಭೂಮಿಯಲ್ಲಿ ಸ್ವಲ್ಪ ಭಾಗವನ್ನು ಟ್ರಸ್ಟೊಂದಕ್ಕೆ ಹಸ್ತಾಂತರಿಸಲು ಅಧಿಕಾರಸ್ಥರು ನಡೆಸಿದ ಪ್ರಯತ್ನ ಇದಕ್ಕೊಂದು ತಾಜಾ ನಿದರ್ಶನ. ಜನತೆಯ ಹೋರಾಟದಿಂದ ಅದಕ್ಕೆ ತಡೆಯಾಗಿದೆ ಎಂಬುದು ನಿಜ. ಆದರೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ಪ್ರತಿಯೊಂದು ಅಕ್ರಮ ವ್ಯವಹಾರವನ್ನೂ ಜನತೆ ಸಾರ್ವಜನಿಕವಾಗಿ ಪ್ರತಿಭಟಿಸಿಯೇ ಸರಿಪಡಿಸಬೇಕಾದ ಸ್ಥಿತಿ ಇದೆ ಎಂಬುದು ಯಾವುದೇ ನಾಗರಿಕ ಸರ್ಕಾರಕ್ಕೆ ಶೋಭೆ ತರುವ ಸಂಗತಿಯಲ್ಲ.

ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಗುಣಮಟ್ಟವೇ ಆಧಾರ. ಅದನ್ನು ಕಾಯ್ದುಕೊಳ್ಳುವುದರಿಂದಲೇ ಜಾಗತಿಕ ಸವಾಲುಗಳನ್ನು ಎದುರಿಸುವುದು ಸಾಧ್ಯ. ಆದರೆ ಈಚಿನ ವಿದ್ಯಮಾನಗಳಿಂದ ಇಂಥ ಚಿಂತನೆ ದೂರವಾಗಿರುವಂತೆ ತೋರುತ್ತದೆ. ವಿಷಯಕ್ಕೊಂದು ವಿಶ್ವವಿದ್ಯಾಲಯ, ಜಿಲ್ಲೆಗೊಂದು ವಿಶ್ವವಿದ್ಯಾಲಯ ಎಂಬಂತೆ ಆಗಿದೆ. ವಿಶ್ವವಿದ್ಯಾಲಯಗಳಲ್ಲಿ ಆಡಳಿತಾಂಗಕ್ಕೆ ಹೆಚ್ಚಿನ ಪಾತ್ರವಿಲ್ಲ. ಆದರೆ ಆಡಳಿತಾಂಗದ ನೆಪದಲ್ಲಿ ಆಗುವ ವೆಚ್ಚದ ಹೆಚ್ಚಳದಿಂದ ಉನ್ನತ ಶಿಕ್ಷಣ ಕ್ಷೇತ್ರಕ್ಕಾಗಲೀ, ಸಂಶೋಧನಾ ಕ್ಷೇತ್ರಕ್ಕಾಗಲೀ ಪ್ರಯೋಜನವಿಲ್ಲ. ಶ್ರೀಸಾಮಾನ್ಯರ ತೆರಿಗೆ ಹಣದ ಅಪವ್ಯಯವಷ್ಟೆ. ಬೋಧನೆ, ಸಂಶೋಧನೆ ಮತ್ತು ಪ್ರಸಾರಾಂಗವೇ ಯಾವುದೇ ಆಧುನಿಕ ವಿಶ್ವವಿದ್ಯಾಲಯಗಳ ಮಹತ್ವಕ್ಕೆ ಮಾನದಂಡಗಳು. ಆಧುನಿಕ ಅಗತ್ಯಕ್ಕೆ ತಕ್ಕಂತೆ ಉನ್ನತ ಶಿಕ್ಷಣವನ್ನು ಜಾಗತಿಕ ಗುಣಮಟ್ಟಕ್ಕೆ ಅನುಗುಣವಾಗಿ ರೂಪಿಸಬೇಕಾದ ಹೊಣೆ ವಿಶ್ವವಿದ್ಯಾಲಯಗಳಿಗೆ ಇದೆ. ಈ ಹೊಣೆಯನ್ನು ನಿರ್ವಹಿಸಲು ಅಗತ್ಯವಾದ ಸಂಪನ್ಮೂಲವನ್ನು ಒದಗಿಸುವ ಹೊಣೆ ಸರ್ಕಾರದ್ದು. ವೃತ್ತಿಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡುವಷ್ಟೇ ಸರಾಗವಾಗಿ ವ್ಯಕ್ತಿಗಳಿಗೆ, ಇಲ್ಲವೇ ಸಂಸ್ಥೆಗಳಿಗೆ ವಿಶ್ವವಿದ್ಯಾಲಯಗಳನ್ನು ತೆರೆಯುವ ಮುಕ್ತ ಅವಕಾಶ ನೀಡುವುದರಿಂದ ಉನ್ನತ ಶಿಕ್ಷಣದ ಆಶಯ ಈಡೇರುತ್ತದೆ ಎಂದು ಹೇಳಲಾಗದು. ಸಂಖ್ಯಾ ಬಾಹುಳ್ಯಕ್ಕಿಂತ ಶ್ರೀಸಾಮಾನ್ಯರೂ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗುವಂಥ ವಾತಾವರಣವನ್ನು ನಿರ್ಮಿಸಬೇಕು. ಅದು ನಾಗರಿಕ ಸರ್ಕಾರದ ಹೊಣೆ.

■ ಲಕ್ಷ್ಮಣ ಕೊಡಸೆ

ವಿಶ್ವವಿದ್ಯಾಲಯಗಳು ಸ್ವಯಂ ಆಡಳಿತದ ಜ್ಞಾನ ದೇಗುಲಗಳು ಎಂಬುದನ್ನು ಸರ್ಕಾರ ನಡೆಸುವವರು ಮರೆಯಬಾರದು. ಆದರೆ ಕುಲಪತಿ ಮಾತ್ರವಲ್ಲದೆ, ಕುಲಸಚಿವ, ಉಪಕುಲಸಚಿವರೇ ಮೊದಲಾದ ಹುದ್ದೆಗಳನ್ನು ಶೈಕ್ಷಣಿಕ ಕ್ಷೇತ್ರಕ್ಕೆ ಹೊರತಾದವರಿಂದ ತುಂಬಿ ವಿಶ್ವವಿದ್ಯಾಲಯಗಳನ್ನು ನಿಯಂತ್ರಿಸಲು ಹೊರಟ ಪರಿಣಾಮ ಉನ್ನತ ಶಿಕ್ಷಣ ಕ್ಷೇತ್ರ ವ್ಯಾಪಕ ಹಸ್ತಕ್ಷೇಪದ ಅಪಾಯದ ಸುಳಿಗೆ ಸಿಲುಕುವಂತಾಗಿದೆ.



ಶಿಲ್ಪಾ